ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ: 24.04.2025

**<u>ಸುತ್ತೋಲೆ</u>**

ವಿಷಯ: ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಪ್ರಾಯೋಗಿಕ "ಪರೀಕ್ಷಾ ಮುಖ್ಯ ಅಧೀಕ್ಷಕರು" ಪ್ರಾಯೋಗಿಕ ಪರೀಕ್ಷಕರ ಕರ್ತವ್ಯ ನಿರ್ವಹಿಸುವ ಬಗ್ಗೆ
ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/03/ಇಸಿಎಸ್(1)/2025 ದಿ:15.04.2025

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸುತ್ತೋಲೆಯಲ್ಲಿ ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಯ ಸಮಯದಲ್ಲಿ "ಪರೀಕ್ಷಾ ಮುಖ್ಯ ಅಧೀಕ್ಷಕರು" ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪೂರ್ಣ ಮಾಹಿತಿ ನೀಡಲಾಗಿತ್ತು.

ಮುಂದುವರೆದು ಪ್ರಾಯೋಗಿಕ ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ನಿಯೋಜಿತರಾದ ಉಪನ್ಯಾಸಕರುಗಳು ತಮ್ಮ ಪರೀಕ್ಷಾ ಕೇಂದ್ರಗಳಲ್ಲಿ ತಮಗೆ ಹಂಚಿಕೆ ಮಾಡಲಾದ ಪ್ರಾಯೋಗಿಕ ಪರೀಕ್ಷಕರ ಕರ್ತವ್ಯವನ್ನು ಸಹ ಕಡ್ಡಾಯವಾಗಿ ನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ತಮ್ಮ ವಲಯದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷಕರ ಕೊರತೆ ಕಂಡುಬಂದಲ್ಲಿ ಪರೀಕ್ಷಕರ ಸಮಿತಿಯ ಅಧ್ಯಕ್ಷರುಗಳು, ಪ್ರಾಯೋಗಿಕ ಪರೀಕ್ಷಾ ಮುಖ್ಯ ಅಧೀಕ್ಷಕರುಗಳನ್ನು ಪ್ರಾಯೋಗಿಕ ಪರೀಕ್ಷಕರ ಕರ್ತವ್ಯಗಳನ್ನು ನಿರ್ವಹಿಸುವಂತೆ ನಿಯೋಜಿಸಿದ್ದಲ್ಲಿ, ಸದರಿ ಕರ್ತವ್ಯವನ್ನು ತಪ್ಪದೇ ನಿರ್ವಹಿಸುವುದು, [redacted] ತಪ್ಪಿದ್ದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಸದರಿ ಪರೀಕ್ಷಾ ಕಾರ್ಯಗಳನ್ನು, ಪರೀಕ್ಷಾ ಪಾವಿತ್ರ್ಯತೆ ಮತ್ತು ಗೌಪ್ಯತೆಯನ್ನು ಕಾಯ್ದುಕೊಂಡು ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ

**ಸೂಚನೆ: ವಿವಿಧ ಪರೀಕ್ಷಕರ ಸಮಿತಿಯ ಅಧ್ಯಕ್ಷರುಗಳು ಪರೀಕ್ಷಾ ಮುಖ್ಯ ಅಧೀಕ್ಷಕರನ್ನು ಬೇರೆ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಕರಾಗಿ ನೇಮಿಸಿದ್ದಲ್ಲಿ ಅಂತಹ ಪರೀಕ್ಷಕರ ನೇಮಕದ ಪಟ್ಟಿಯನ್ನು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.**

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ/ ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರುಗಳಿಗೆ – ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಇ-ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇಎಪಿ ವಿಭಾಗ
4. ಸಿಸ್ಟಂ ಅನಾಲಿಸ್ಟ್ – ಗಣಕ ಕೇಂದ್ರ
5. ಕಾಯದರ್ಶಿಯವರ ಆಪ್ತಶಾಖೆ